ಸಬ್ಜೆಕ್ಟ್. ನಾನು ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಅವರು ಹೇಳಿದ ಮಾತು ಬಹಳ ಸತ್ಯ. ನಾವು ಇನ್‌ಫ್ಲುಯೆನ್ಸ್ ಮಾಡುವುದರ ಮುಖಾಂತರ ಅಂತರ್ಜಲದ ಸ್ಥಿತಿಯನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಅವರು ಈ ಬಗ್ಗೆ ಸರಿಯಾಗಿ ಅಭ್ಯಾಸ ಮಾಡಿಕೊಂಡು ಒಂದು ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ನೀವು ಪ್ರಶ್ನೆ ಕೇಳಿದಿರಿ ಎಂದು ಉತ್ತರ ಕೊಡುವುದಕ್ಕಿಂತ ಹೆಚ್ಚಾಗಿ ಅವರೇ ಲೀಡ್ ತೆಗೆದುಕೊಳ್ಳಲಿ. ಇದರ ಬಗ್ಗೆ ಒಂದು ಸಭೆ ಕರೆದು, ಈಗ ಮಹಾರಾಷ್ಟ್ರದಲ್ಲಿ ಏನು ಮಾಡಿದ್ದಾರೆ? ಬೇರೆ ರಾಜ್ಯದಲ್ಲಿ ಏನು ಮಾಡಿದ್ದಾರೆ? ನಾವು ಅಂತರ್ಜಲ ಅಭಿವೃದ್ಧಿಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ಆಲೋಚನೆ ಮಾಡೋಣ. Then we can find a solution for this.

(ಉ) ಅಲ್ಪಸಂಖ್ಯಾತರ ಮತ್ತು ಹಿಂದುಳಿದ ವರ್ಗಗಳ ಶಿಕ್ಷಣ ಸಂಸ್ಥೆಗಳಿಗೆ ವೇತನ ಅನುದಾನ ಕೊಡುವ ಬಗ್ಗೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಮಾನ್ಯ ಅಧ್ಯಕ್ಷರೇ, ಈ ಅಲ್ಪಸಂಖ್ಯಾತರ ಮತ್ತು ಹಿಂದುಳಿದ ವರ್ಗಗಳ ಶಿಕ್ಷಣ ಸಂಸ್ಥೆಗಳಿಗೆ ವೇತನ ಅನುದಾನ ಕೊಡುವ ಬಗ್ಗೆ ಪತ್ರಿಕೆಯಲ್ಲಿ ಓದಿದ್ದೇನೆ. ದಿನಾಂಕ 1-6-1987ರ ನಂತರ ಪ್ರಾರಂಭವಾಗಿರುವ ಶಾಶ್ವತ ಅನುದಾನ ರಹಿತ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಶಿಕ್ಷಣ ಸಂಸ್ಥೆಗಳಿಗೆ ವೇತನ ಅನುದಾನವನ್ನು ನೀಡಲು ಸರ್ಕಾರ ಮುಂದಾಗಿದ್ದು, ಸಂಪುಟದಲ್ಲಿ ಈ ವಿಚಾರ ಚರ್ಚೆಯಾಗಿದ್ದು, ಉಪಸಮಿತಿ ನಿರ್ಣಯದಂತೆ ವೇತನ ಅನುದಾನ ಬಿಡುಗಡೆ ಮಾಡುತ್ತೇವೆಂದು ಹೇಳಿದ ವಿಚಾರ ಪತ್ರಿಕೆಯಲ್ಲಿ ಓದಿದ್ದೇನೆ. ಆದರೆ ವಿಧಾನಸಭೆಯಲ್ಲಿ ಇದಕ್ಕೆ ಪ್ರಶ್ನೆಯನ್ನು ಹಾಕಿದಾಗ, ಅನುದಾನ ಕೊಡುವುದಕ್ಕಾಗುವುದಿಲ್ಲವೆನ್ನುವಂತಹ ಉತ್ತರವನ್ನು ಮಾನ್ಯ ಮಂತ್ರಿಯವರು ಕೊಟ್ಟಿದ್ದಾರೆ. ಇವರು ಪತ್ರಿಕೆಯಲ್ಲಿ ಒಂದು ರೀತಿ, ವಿಧಾನಸಭೆಯಲ್ಲಿ ಒಂದು ರೀತಿ ಹೇಳುತ್ತಾರೆ. ಆದರೆ ನಾನು ಕೇಳುವುದೇನೆಂದರೆ, ಸಂವಿಧಾನಬದ್ಧವಾಗಿ, ಕಡ್ಡಾಯವಾಗಿ ಶಿಕ್ಷಣ ಕೊಡಬೇಕು ಎನ್ನುವ ವಿಚಾರದಲ್ಲಿ 14 ವರ್ಷದೊಳಗಿನ ಮಕ್ಕಳಿಗೆ ಉಚಿತವಾಗಿ ಶಿಕ್ಷಣವನ್ನು ಕೊಡತಕ್ಕಂಥ ಹಿನ್ನೆಲೆಯಲ್ಲಿ ಬಹುಶಃ ಎಂಟು ಮತ್ತು ಒಂಬತ್ತನೆ ತರಗತಿ ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ಕೊಡಬೇಕು. ಆ ಶಿಕ್ಷಣ ಸಂಸ್ಥೆಯಲ್ಲಿ ಅನುದಾನವನ್ನು ಕೊಡದೇ ಇದ್ದರೆ, ಸರ್ಕಾರ ಹೊಸ ಶಾಲೆಗಳನ್ನು ಪ್ರಾರಂಭ ಮಾಡದೆ ಹೋದರೆ ವಿದ್ಯಾರ್ಥಿಗಳ ಗತಿ ಏನು? ಇದನ್ನು ತಾವು ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ಎಲ್ಲರಲ್ಲೂ ವಿಶೇಷವಾಗಿ ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳಿಗೆ ಇರತಕ್ಕಂಥ ಶಿಕ್ಷಣ ಸಂಸ್ಥೆಗಳಿಗೆ ಆದ್ಯತೆ ಮೇರೆಗೆ ಪರಿಗಣಿಸಬೇಕು. ಇಲ್ಲದೇ ಇದ್ದರೆ ಪರ್ಯಾಯ ವ್ಯವಸ್ಥೆಯನ್ನು ಸರ್ಕಾರವಾದರೂ ತೆಗೆದುಕೊಳ್ಳಲಿ. ಅದೂ ಇಲ್ಲ, ಇದೂ ಇಲ್ಲವೆಂದರೆ

ಹೇಗೆ? ಮಾನ್ಯ ಸಗೀರ್ ಅಹಮದ್ ರವರು ನಮ್ಮ ಕ್ಷೇತ್ರದಲ್ಲಿ ಒಂದು ಶಾಲೆಯನ್ನು ಪ್ರಾರಂಭ ಮಾಡುವುದಕ್ಕೆ ಹೇಳಿದರು. ಈಗ ಅವರು ಮಂತ್ರಿಗಳಲ್ಲ. ಆದರೆ ಕೋಡಿಯಲ್ಲಿ ಒಂದು ಶಿಕ್ಷಣ ಸಂಸ್ಥೆಗಳು ಇವೆ. ಅದನ್ನು ಯಾವ ರೀತಿಯಲ್ಲಿ ಬಗೆಹರಿಸುತ್ತೇವೆಂದು ಸರ್ಕಾರದವರು ಹೇಳಬೇಕಾಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ (ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೇ, ಇದು ಒಂದು ಗಂಭೀರವಾಗಿರತಕ್ಕಂಥ ಸಮಸ್ಯೆ. 14 ವರ್ಷದವರೆಗೆ ನಾವು ಎಲ್ಲರಿಗೂ ಉಚಿತ ವಿದ್ಯಾಭ್ಯಾಸವನ್ನು ಕೊಡಬೇಕು. That is one of the Directive Principles of the Constitution. ಇದಕ್ಕೆ ಸಂಬಂಧಪಟ್ಟಹಾಗೆ ರಾಜ್ಯ ಉಚ್ಚ ನ್ಯಾಯಾಲಯದಿಂದ ಒಂದು ತೀರ್ಪು ಕೂಡ ಹೊರಬಂತು. ಆ ತೀರ್ಪಿನಲ್ಲಿ ಅವರು ಏನು ಹೇಳುತ್ತಾರೆಂದರೆ, ನಮ್ಮ ರಾಜ್ಯದಲ್ಲಿ ಯಾವ್ಯಾವ ಸಂಸ್ಥೆಗಳು ವಿದ್ಯಾಭ್ಯಾಸವನ್ನು ಕೊಡುತ್ತಿವೆ, ಆ ವಿದ್ಯಾಭ್ಯಾಸವನ್ನು ಕೊಡತಕ್ಕಂಥ ಸಂಘಸಂಸ್ಥೆಗಳಲ್ಲಿ ಇರತಕ್ಕಂಥ ಅಧ್ಯಾಪಕ ವೃಂದದವರಿಗೆ ಮತ್ತು ಅಲ್ಲಿ ಆಗತಕ್ಕಂಥ ಖರ್ಚು ವೆಚ್ಚಗಳು ಏನಿದೆ ಅದನ್ನು ರಾಜ್ಯಸರ್ಕಾರ ಭರಿಸಬೇಕೆಂದು ಹೇಳಿದ್ದಾರೆ. ನಾವು ಇವತ್ತು ವಿದ್ಯೆ ಮೇಲೆ ಖರ್ಚು ಮಾಡುತ್ತಿರುವುದು ಒಂದು ವರ್ಷಕ್ಕೆ ಮೂರು ಸಾವಿರ ಕೋಟಿ ರೂಪಾಯಿಗಳು. 1997 ಕಳೆದ ಮೇಲೆ ವಿದ್ಯಾ ಸಂಸ್ಥೆಯನ್ನು ಕಟ್ಟುತ್ತೇವೆ ಎಂದು ಬಂದಿರುವವರು ಸರ್ಕಾರಕ್ಕೆ ಏನು ಹೇಳಿವೆ ಎಂದರೆ ನಮಗೆ ಅನುದಾನ ಬೇಕಾಗಿಲ್ಲ, ವಿದ್ಯಾ ಸಂಸ್ಥೆಯನ್ನು ನಡೆಸುವುದಕ್ಕೆ ಅನುಮತಿ ಕೊಡಿ ಸಾಕು, ನಾವು ಎಲ್ಲಾದರೂ ಹಣ ಹೊಂದಿಸಿಕೊಂಡು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡುತ್ತೇವೆಂದು ಹೇಳಿದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಅಂದಿನಿಂದ ಇಂದಿನವರೆಗೆ ಎಲ್ಲಾ ವರ್ಗದಲ್ಲಿ ಇರತಕ್ಕಂಥ ಜನರಿಗೆ ವಿದ್ಯಾ ಸಂಸ್ಥೆಯನ್ನು ನಿರ್ಮಾಣ ಮಾಡುವುದಕ್ಕೆ ನಾವು ಅನುಮತಿ ಕೊಟ್ಟಿದ್ದೇವೆ. ಈ ಬಗ್ಗೆ ಇಲ್ಲ ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ಆದರೆ ಇವತ್ತು ಎಲ್ಲಾ ಸಂಘಸಂಸ್ಥೆಗಳು ನಡೆಸುತ್ತಿರತಕ್ಕಂಥ ಈ ವಿದ್ಯಾ ಸಂಸ್ಥೆಗಳಿಗೆ 14 ವರ್ಷದ ಒಳಗಡೆ ಇರುವಂತಹ ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕೆ ಒಳಪಟ್ಟಿರುವಂತಹದಕ್ಕೆ ನಾವು ಕೊಡಬೇಕು ಎಂದರೆ ನಮಗೆ ಬೇಕಾಗಿರತಕ್ಕಂಥ ಹಣ ಸುಮಾರು 600 ಕೋಟಿ ರೂಪಾಯಿಗಳು. ಈ ಹಣವನ್ನು ಇವತ್ತು ರಾಜ್ಯ ಸರ್ಕಾರದಿಂದ ಕೊಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡು, 1987 ರಿಂದ ದಿನಾಂಕ 1-6-96 ರವರೆಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರು ನಡೆಸುತ್ತಿರತಕ್ಕಂಥ ವಿದ್ಯಾ ಸಂಸ್ಥೆಗಳು ಯಾವುದಿದೆ ಮತ್ತು ಎಲ್ಲಿ ಅದನ್ನು ಸರಿಯಾಗಿ ನಡೆಸುತ್ತಿದ್ದಾರೆ ಅದನ್ನು ನೋಡಿ ಅಂತಹವರಿಗೆ ಅನುದಾನವನ್ನು ಬಿಡುಗಡೆ ಮಾಡುವುದಕ್ಕೆ ಸಚಿವಸಂಪುಟದ ಉಪಸಮಿತಿ ಒಂದುಶಿಫಾರಸ್ಸು ಮಾಡಿದೆ. ಆದರೆ ಆ ಸಂದರ್ಭದಲ್ಲಿ ನಮ್ಮ ಉಚ್ಚನ್ಯಾಯಾಲಯ ಕೊಟ್ಟಿರತಕ್ಕಂಥ ತೀರ್ಪು ಬಂದಮೇಲೆ ಇವರಿಗೆ ಕೊಟ್ಟರೆ ಬೇರೆಯವರಿಗೂ ಕೊಡಬೇಕೆನ್ನುವ ವಿಚಾರ ಸರ್ಕಾರದ ಮುಂದೆ ಬಂದಿದೆ. ಈ ವಿಚಾರ

ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿ ಅವರು ಈ ಉಚ್ಚನ್ಯಾಯಾಲಯದ ತೀರ್ಪನ್ನು ತಡೆಗಟ್ಟಿದ್ದಾರೆ. ಇದನ್ನು ಯಾವ ರೀತಿ ಬಗೆಹರಿಸಬೇಕೆಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಇದೆ. ಆದರೆ ಇವತ್ತಿಗೂ ಸರ್ಕಾರದ ಮಟ್ಟದಲ್ಲಿ ದಿ: 1-6-87 ರಿಂದ ದಿ: 1-6-96 ರವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಪಟ್ಟ ಹಾಗೆ ಸರಿಯಾಗಿ ನಡೆಸತಕ್ಕಂಥ ಸಂಸ್ಥೆಗಳು ಯಾವುದಿದೆ ಅದಕ್ಕೆ ಸಂಬಂಧಪಟ್ಟ ಹಾಗೆ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಚಿವಸಂಪುಟದ ಪರಿಶೀಲನೆಯಲ್ಲಿದೆ. ಬಾಕಿ ಇರತಕ್ಕಂಥ ವಿಚಾರ ಇವತ್ತಿಗೂ ಸರ್ಕಾರದ ಮುಂದೆ ಇಲ್ಲ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ :— ತಾವು ಹೇಳುತ್ತಿರುವುದು 1987 ರಿಂದ 96ರ ತನಕದವರೆಗೂ. ಆದರೆ ಈಗಿರತಕ್ಕಂಥಾದ್ದು ಏನು ಸಾರಾಸಗಟಾಗಿ ಎಲ್ಲಾ ಹೈಸ್ಕೂಲ್‌ಗಳಿಗೆ ಕೊಡಿ, ಕಾಲೇಜುಗಳಿಗೆ, ಪ್ರಾಥಮಿಕ ಶಾಲೆಗಳಿಗೆ ಕೊಡಿ ಎನ್ನುವುದು ನಮ್ಮ ವಾದವಲ್ಲ. ಯಾವುದು ವ್ಯವಸ್ಥಿತವಾಗಿ 60 ರಿಂದ 70 ವಿದ್ಯಾರ್ಥಿಗಳು ಹೋಗತಕ್ಕಂಥ ಶಾಲೆಗಳಿವೆ ಅಂತಹ ಶಾಲೆಗಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ಕೊಡಬೇಕು. ಏಕೆಂದರೆ ನೆಪ ಮಾತ್ರಕ್ಕೆ ಡೊನೇಷನ್ ತೆಗೆದುಕೊಳ್ಳುವುದಕ್ಕೋಸ್ಕರ ಖಾಸಗಿ ಶಾಲೆಗಳನ್ನು ಪ್ರಾಥಮಿಕ ಮಾಡಿದಂತಹವರಿಗೆ ಕೊಡಬೇಕಾಗಿಲ್ಲ. ಯಾವುದೇ ಒಂದು ಡೊನೇಷನ್ ಪಡೆಯದೆ ತಮ್ಮದೇ ಆದ ಊರವರ ಸಹಕಾರದಿಂದ ನಡೆಸತಕ್ಕಂಥ ಶಿಕ್ಷಣ ಸಂಸ್ಥೆಗಳಿಗೆ ತಾವು ಪ್ರೋತ್ಸಾಹ ಕೊಡದೇ ಇದ್ದರೆ ಹೇಗೆ? ತಾವು ಸರ್ಕಾರಿ ಶಾಲೆಗಳನ್ನು ತೆರೆಯುತ್ತೀರಿ ಒಂದು ಕಡೆ ಇಲ್ಲಿ ಖಾಸಗಿಯವರು ಸಿಕ್ಕಿಹಾಕಿಕೊಂಡಿದ್ದಾರೆ. ಒಂದು ರೀತಿ ಧೈರ್ಯದಿಂದ ನಾವೆಲ್ಲಾ ನಡೆಸಿಕೊಂಡು ಹೋಗುತ್ತೇವೆಂದು ಮಾತನ್ನು ಕೊಟ್ಟು ಸಿಕ್ಕಿಹಾಕಿಕೊಂಡಿದ್ದಾರೆ. ಅಂತಹ ಶಿಕ್ಷಣ ಸಂಸ್ಥೆಗಳು ಅರ್ಧದಲ್ಲಿ ನಿಲ್ಲುತಕ್ಕಂಥ ಪರಿಸ್ಥಿತಿ ಬರುತ್ತಿದೆ. ಆದುದರಿಂದ ಇದರ ಬಗ್ಗೆ ತಾವು ಚಿಂತನೆ ಮಾಡಿ ಐದು ವರ್ಷವಾಗಲಿ ಅಥವಾ 10 ವರ್ಷಗಳಾಗಲಿ ನಡೆಸಿದವರಿಗೆ ಕೊಡಬೇಕೆನ್ನುವ ನೀತಿಯನ್ನು ರೂಪಿಸಿದರೆ ಏನಾದರೂ ಪರಿಹಾರವಾಗುತ್ತದೆ, ಇಲ್ಲದೆ ಇದ್ದರೆ ನಮ್ಮ ಮೂಲ ಉದ್ದೇಶ ಸಫಲವಾಗುವುದಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ :— ಮಾನ್ಯ ಅಧ್ಯಕ್ಷರೇ, ಪ್ರತಿಯೊಂದು ಕೂಡ ನಾವು ಸಂಪನ್ಮೂಲಗಳನ್ನು ಅವಲಂಬಿಸಿಕೊಂಡು ಈ ಕೆಲಸವನ್ನು ಮಾಡಬೇಕಾಗುತ್ತದೆ. ಸಂಪನ್ಮೂಲವಿಲ್ಲದೆ ಈ ಕೆಲಸವನ್ನು ಮಾಡಬೇಕೆಂದರೆ ಯಾವ ಸರ್ಕಾರದಿಂದ ಕೂಡ ಆಗುವುದಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಒಂದ ಲಕ್ಷ ಶಿಕ್ಷಕರನ್ನು ಹೊಸದಾಗಿ ನೇಮಕಾತಿ ಮಾಡಿದ್ದೇವೆ. ಅವರಿಗೆ ಸುಮಾರು 200 ಕೋಟಿ ರೂಪಾಯಿಗಳ ಖರ್ಚು ಜಾಸ್ತಿ ಮಾಡಿದ್ದೇವೆ. ಆದುದರಿಂದ ಈ ಎಲ್ಲಾ ಅನುದಾನರಹಿತ ಶಾಲೆಗಳಿಗೆ ಕೊಡಬೇಕು ಎಂದರೆ ಸರ್ಕಾರದಲ್ಲಿ ಕೊಡುವುದಕ್ಕೆ ಹಣವಿಲ್ಲ. ಶಿಕ್ಷಕರಿಗೆ ಸಂಬಳ ಕೊಡುವುದಕ್ಕೆ ಹಣ ಇದೆ. ಅದು ಎಲ್ಲರಿಗೂ ಗೊತ್ತಿರುವ ವಿಚಾರ. ಸಂಪನ್ಮೂಲಗಳನ್ನು ವೃದ್ಧಿ ಮಾಡಿಕೊಂಡು ಆ ಸಂದರ್ಭದಲ್ಲಿ ಯಾವರೀತಿ ಕ್ರಮ ತೆಗೆದುಕೊಳ್ಳಬೇಕು ಎನ್ನುವ ಯೋಚನೆ ಮಾಡಬಹುದು.